ಣಾಂತರಗಳಿಂದ ನಿರ್ಧಾರ ಮಾಡಿದೆ. ಏಕೆಂದರೆ ಬಹಳ ಕಡೆಯಿಂದ ದೂರುಗಳು ಬರುತ್ತಿವೆ. ಅವರು ರಾಜಕೀಯ ಮಾಡುತ್ತಾರೆ, ಸ್ವಂತ ವ್ಯಪಹಾರಗಳನ್ನು ಮಾಡಿಕೊಳ್ಳುತ್ತಾರೆ. ಮಕ್ಕಳಿಗೆ ಸರಿಯಾಗಿ ಪಾಠ ಹೇಳುತ್ತಿಲ್ಲ ಎಂದು ದೂರು ಬಂದಮೇಲೆ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತಿದೆ.

(ii) ಶಿಕ್ಷಣ ಇಲಾಖೆಯಲ್ಲಿ ಪ್ರತಿವರ್ಷ ನಿಧಿಗೆ ಹಣವನ್ನು ಸಂಗ್ರಹಿಸುವುದು.

ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).--ಸನ್ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆಯಲ್ಲಿ ಪ್ರತಿವರ್ಷ ಶಿಕ್ಷಕರ ಕಲ್ಯಾಣ ನಿಧಿ ಮಕ್ಕಳ ಕಲ್ಯಾಣ ನಿಧಿ, ಶಿಕ್ಷಕರ ದಿನಾಚರಣೆ, ಮಕ್ಕಳ ಹಾಗೂ ಮಹಿಳಾ ದಿನಾಚರಣೆ, ರೆಡ್‌ಕ್ರಾಸ್ ದಿನಾಚರಣೆ ಮುಂತಾದವುಗಳ ಮೂಲಕ ನಿಧಿ ಸಂಗ್ರಹಿಸಲು ಶಿಕ್ಷಕರ ಮುಖಾಂತರ ಟೀಕೆಟು ಮಾರಾಟ ಮಾಡುತ್ತಿದ್ದು ಅವುಗಳಿಗೆಲ್ಲಾ ಬಡ ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಪಾಲಕರಿಂದ ಲಕ್ಷಗಟ್ಟಲೆ ಹಣ ಸಂಗ್ರಹಿಸುತ್ತಾ ಬಂದಿದ್ದಾರೆ. ಹೀಗೆ ಸಂಗ್ರಹಿಸಿದ ಲಕ್ಷಾಂತರ ರೂಪಾಯಿಗಳ ಹಣ ಎಲ್ಲಿಗೆ ಹೋಗುತ್ತದೆ ? ಈ ಟಿಕೇಟುಗಳನ್ನು ಮುದ್ರಣ ಮಾಡುವಾಗ ಅದಕ್ಕೇ ನಾದರೂ ಸಂಖ್ಯಾಮಿತಿ ಹಾಕಲಾಗುತ್ತದೆಯೆ ? ಮುದ್ರಿಸಿದ ಎಲ್ಲಾ ಟಿಕೇಟುಗಳು ಮಾರಾಟ ವಾಗುತ್ತವೆಯೆ ? ಇದರಿಂದ ಎಷ್ಟು ಶಿಕ್ಷಕರಿಗೆ ಪ್ರಯೋಜನವಾಗಿದೆ ? ಇದರಲ್ಲಿಯೂ ಪ್ರಾದೇಶಿಕ ತಾರತಮ್ಯವಿದೆಯೆ ? ಹಿಂದೆ ದಿ॥ ಪಿ. ಎಂ. ನಾಡಗೌಡರು ವಿಜಾಪುರ ಜಿಲ್ಲಾ ಸ್ಕೂಲ್ ಬೋರ್ಡ್ ಚೇರ್ಮನ್ನರಿದ್ದಾಗ ಶ್ರೀ ಜೇವೂರು ಎಂಬವರು ಶಿಕ್ಷಣ ಇಲಾಖೆಯ ನಿರ್ದೇಶಕರಿದ್ದರು. ಸ್ಕೂಲ್ ಬೋರ್ಡ್ ಹೋಗಿ ಸರ್ಕಾರಿ ಶಾಲೆಗಳಾದಾಗ ನಿವಂಗೆಲ್ಲಾ ಸಂಬಳ ಕೊಡುವಷ್ಟು ಹಣ ಈ ನಿಧಿಯಲ್ಲಿದೆ ಯೆಂದು ಹೇಳಿದ್ದರು. ಈ ನಿಧಿಯು ಇಡೀ ರಾಜ್ಯದ ಎಲ್ಲಾ ಭಾಗಗಳಿಂದ ಸಂಗ್ರಹವಾಗಿದ್ದರೂ ಅದರ ಪ್ರಯೋಜನ ಮಾತ್ರ ಬೆಂಗಳೂರು ಹಾಗೂ ಆದರ ಸುತ್ತಮುತ್ತಲಿನವರಿಗೆ ಆಗುತ್ತಿದೆಯೆಂದು ದೂರುಗಳು ಬಂದಿದ್ದು ಇದರ ಕುರಿತು ವಿವರಣೆ ಕೇಳಿದಾಗ ಅಧಿಕಾರಿಗಳು ಏನಾದರೊಂದು ಸಬೂಬು ಹೇಳುತ್ತಾ ಬಂದಿದ್ದಾರೆ. ರಾಜ್ಯದ ಎಲ್ಲಾ ಭಾಗದ ಶಿಕ್ಷಕರಿಗೆ ಇದರ ಪ್ರಯೋಜನವಾಗುವಂತೆ ಮಾನ್ಯ ಶಿಕ್ಷಣ ಸಚಿವರು ಕ್ರಮ ಯಾವರೀತಿ ತೆಗೆದುಕೊಳ್ಳುತ್ತಾರೆ ?

ಶ್ರೀ ಆರ್, ಎಲ್. ಜಾಲಪ್ಪ.--ನನಗೆ ತಿಳಿದಮಟ್ಟಿಗೆ ಶಿಕ್ಷಣ ಇಲಾಖೆಯಿಂದ ಈ ರೀತಿ ರುಸುಂ ವಸೂಲು ಮಾಡುತ್ತಿಲ್ಲ. ಆದರೂ ಈ ವಿಷಯವನ್ನು ಸನ್ಮಾನ್ಯ ಶಿಕ್ಷಣ ಮಂತ್ರಿಗಳ ಗಮನಕ್ಕೆ ತಂದು ಉತ್ತರ ಕೊಡುವುದಕ್ಕೆ ಕೇಳಿಕೊಳ್ಳುತ್ತೇನೆ.

(iii) ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ವೇ ಬ್ರಿಡ್ಜ್‌ಗಳು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).--ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ವೇ ಬ್ರಿಡ್ಜ್‌ಗಳ ಉಪಯೋಗವು ಯಾವ ರೀತಿಯಿಂದ ಸರಕಾರಕ್ಕೆ ಆಗುತ್ತಿದೆಯೆಂದು ತಿಳಿಯಲಾರದ ಸಂಗತಿ. ಸರಕಾರಿ ಸ್ವಾಮ್ಯತ್ವದ ಈ ವೇ ಬ್ರಿಡ್ಜ್‌ಗಳನ್ನು ಪ್ರಾಸಗಿ ಜನರಿಗೆ ವೆಹಿಸಿಕೊಟ್ಟು ಬಾಡಿಗೆಯಿಂದ ನಡೆಸಬಹುದು. ಸರಕಾರದ ಸ್ವಾಮ್ಯತ್ವದ ಒಟ್ಟಾರೆ ವೇ ಬ್ರಿಡ್ಜ್‌ಗಳ ಸಂಖ್ಯೆ ಎಷ್ಟು ? ಎಷ್ಟು ವರ್ಷಗಳಿಂದ ಇವು ದುರುಪಯೋಗವಾಗುತ್ತಿವೆ ? ಇದಕ್ಕಾಗಿ ಸರ್ಕಾರದಿಂದ ಮಾಡಿರುವ ಒಟ್ಟಾರೆ ಖರ್ಚು ಎಷ್ಟು ? ಈ ಎಲ್ಲಾ ವಿಷಯಗಳನ್ನು ಸದನದ ಮುಖೇನ ಸರಕಾರದ ಗಮನವನ್ನು ಸೆಳೆಯುತ್ತಾ ಇದ್ದು ಸಾರಿಗೆ ಮಂತ್ರಿಗಳಿಂದ ವಿವರವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಆರ್, ಎಲ್ ಜಾಲಪ್ಪ.--ಈ ವಿಷಯವನ್ನು ಸಾರಿಗೆ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಆ ಮಂತ್ರಿಗಳು ಬೇರೆ ಎಲ್ಲೋ ಹೋಗಿದ್ದಾರೆ. ಅವರ ಗಮನಕ್ಕೆ ತರುತ್ತೇನೆ.